ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ, ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ.

ಆ) ಬಸ್ ನಿಲ್ದಾಣದ ಆವರಣಕ್ಕೆ ೧೯೮೬-೮೮ನೇ ಸಾಲಿನಲ್ಲಿ ಡಾಂಬರು ಹಾಕಲಾಗುವುದು.

ರಾಜ್ಯ ಸಾರಿಗೆ ಸಂಸ್ಥೆಯ ಬಗ್ಗೆ

೯೩೬. ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ).— ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಬಸ್‌ಗಳು ಸರಿಯಾಗಿ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿವೆ. ಹಾಗೂ ಎಷ್ಟು ಬಸ್‌ಗಳು ದುರಸ್ತಿ ಇಲ್ಲದೆ ಇರುವುವು?

ಶ್ರೀ ವೀರಣ್ಣ (ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೩೧-೧೨-೧೯೮೬ರಂತೆ ೭೬೫೯ ವಾಹನಗಳನ್ನು ಹೊಂದಿದೆ. ಈ ಕೆಳಕಂಡ ಪಟ್ಟಿಯಲ್ಲಿ ಸಂಸ್ಥೆಯಲ್ಲಿರುವ ವಾಹನಗಳ ಸಂಖ್ಯೆ ದುರಸ್ತಿಗಾಗಿ ಕಾರ್ಯಾಗಾರದಲ್ಲಿ ನಿಂತಿರುವ ಮತ್ತು ಅನುಪಯುಕ್ತವಾದ ವಾಹನಗಳ ಸಂಖ್ಯೆಯ ವಿವರಗಳನ್ನು ಕೊಟ್ಟಿದೆ.

ಸಂಸ್ಥೆಯು ಹೊಂದಿರುವ ವಾಹನಗಳು	ಸುಸ್ಥಿತಿಯಲ್ಲಿದ್ದು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿರುವ ವಾಹನಗಳು	ಪ್ರಾದೇಶಿಕ ಕಾರ್ಯಾಗಾರದಲ್ಲಿ ದುರಸ್ತಿಗಾಗಿ ನಿಂತಿರುವ ವಾಹನಗಳು	ಅನುಪಯುಕ್ತವಾದ ವಾಹನಗಳು
೭೬೫೯	೭೧೬೧	೪೩೪	೬೪

"ಸಾರಾಯಿ ಬಾಂಟ್ಲಿಂಗ್" ಲೈಸನ್ಸ್‌ಗಳ ಬಗ್ಗೆ

೯೯೩. ಶ್ರೀ ಎನ್. ಎಂ. ಅಡ್ಯಂತಾಯ (ಸಂರತ್ಕಲ್).— ಮಾನ್ಯ ಆರೋಗ್ಯ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರವು ಡಿಸೆಂಬರ್ ೧೯೮೬ರಲ್ಲಿ ನೀಡಿರುವ ಸಾರಾಯಿ ಬಾಟ್ಲಿಂಗ್ ಲೈಸನ್‌ಗಳನ್ನು ಯಾವ ಯಾವ ಡಿಸ್ಟಿಲರಿಗಳಿಗೆ ನೀಡಿದೆ?

ಆ) ಲೈಸನ್ಸ್‌ಗಳನ್ನು ಪಡೆದಿರುವವರ ವಿವರಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬಕಾರಿ ಸಚಿವರು).—

ಅ) ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ರಾಜ್ಯದಲ್ಲಿ ಸಾರಾಯಿಯನ್ನು ಸೀಸೆಗಳಲ್ಲಿ ತುಂಬಿ ಸರಬರಾಜು ಮಾಡಲು ತಾತ್ಕಾಲಿಕವಾಗಿ ಈ ಕೆಳಕಂಡ ಡಿಸ್ಟಿಲರಿಗಳಿಗೆ ಪರವಾನಿಗೆಗಳನ್ನು ಕೊಡಲಾಗಿದೆ.

೧) ಮೈಸೂರು ಶುಗರ್ ಕಂ. ಮಂಡ್ಯ.
೨) ಮೆ. ಜೆಮಿನಿ ಡಿಸ್ಟಿಲರೀಸ್ ಲಿ. ನಂಜನಗೂಡು.
೩) ಮೆ. ಡಿಸ್ಟಿಲರಿ ಕಂ. (ಪ್ರೈ) ಲಿಮಿಟೆಡ್ ಶಿವಮೊಗ್ಗ.

೪) ಮೆ. ರವೀಂದ್ರ ಮತ್ತು ಕಂಪನಿ. ಬೀದರ್.
೫) ಸಪ್ತಗಿರಿ ಎಂಟರ್‌ಪ್ರೈಸಸ್ ಸಮೀರ್‌ವಾಡಿ, ವಿಜಾಪುರ ಜಿಲ್ಲೆ
೬) ಮೆ. ಕರ್ನಾಟಕ ಬ್ರೀವರೀಸ್. ಮತ್ತು ಡಿಸ್ಟಿಲರೀಸ್ (ಪ್ರೈ) ಲಿಮಿಟೆಡ್ ಬೆಂಗಳೂರು.
೮) ವಿವರಗಳನ್ನು ಅನುಬಂಧ (೮) ದಲ್ಲಿ ಕೊಡಲಾಗಿದೆ.

ಅನುಬಂಧ–೮

ಕ್ರಮ ಸಂಖ್ಯೆ	ಡಿಸ್ಟಿಲರಿಗಳ ಹೆಸರು	ನಿಗಧಿತ ಜಿಲ್ಲೆಗಳು
೧)	ಮೆ. ಮೈಸೂರ್ ಶುಗರ್ ಕಂಪನಿ, ಮಂಡ್ಯ	ಮಂಡ್ಯ ಜಿಲ್ಲೆ.
೨)	ಮೆ. ಜೆಮಿನಿ ಡಿಸ್ಟಿಲರೀಸ್ ಲಿಮಿಟೆಡ್ ನಂಜನಗೂಡು.	ಮೈಸೂರು ಕೊಡುಗು ಮತ್ತು ಹಾಸನ ಜಿಲ್ಲೆಗಳು.
೩)	ಮೆ. ಡಿಸ್ಟಿಲರೀಸ್ ಕಂಪನಿ. (ಪ್ರೈ) ಲಿಮಿಟೆಡ್. ಶಿವಮೊಗ್ಗ.	ಶಿವಮೊಗ್ಗ, ಚಿತ್ರದುರ್ಗ, ಕೊಪ್ಪ ಶೃಂಗೇರಿ ಮತ್ತು ಎನ್. ಆರ್. ಪುರ ತಾಲ್ಲೂಕುಗಳನ್ನು ಹೊರತು ಪಡಿಸಿ ಚಿಕ್ಕಮಗಳೂರಿನ ಎಲ್ಲಾ ತಾಲ್ಲೂಕುಗಳು.
೪)	ಮೆ. ರವೀಂದ್ರ ಮತ್ತು ಕಂಪನಿ. (ಪ್ರೈ) ಲಿಮಿಟೆಡ್ ಬೀದರ್.	ಬಿಜಾಪುರ, ಬೆಳಗಾಂ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು.
೫)	ಮೆ. ಸಪ್ತಗಿರಿ ಎಂಟರ್‌ಪ್ರೈಸಸ್ ಸಮೀರವಾಡಿ ಬಿಜಾಪುರ ಜಿಲ್ಲೆ	ಬೀದರ್, ಗುಲ್ಬರ್ಗ, ರಾಯಚೂರ್, ಬಳ್ಳಾರಿ ಮತ್ತು ಚಿಕ್ಕಮಗಳೂರಿನ ತಾಲ್ಲೂಕುಗಳಾದ ಕೊಪ್ಪ, ಶೃಂಗೇರಿ ಮತ್ತು ಎನ್.ಆರ್. ಪುರ, ಮಂತು ದಕ್ಷಿಣ ಕನ್ನಡ ಜಿಲ್ಲೆ.
೬)	ಮೆ. ಕರ್ನಾಟಕ ಬ್ರೀವರೀಸ್ ಮತ್ತು ಡಿಸ್ಟಿಲರೀಸ್,(ಪ್ರೈ) ಲಿಮಿಟೆಡ್, ಬೆಂಗಳೂರು.	ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳು.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ

೪೨೩. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಎರಡೂ ರಾಜ್ಯ ಮುಖ್ಯ ಮಂತ್ರಿಗಳು ಈವರೆಗೆ ಎಷ್ಟು ಬಾರಿ ಸಭೆ ನಡೆಸಿದ್ದಾರೆ.

೯) ಸದರಿ ಸಭೆಗಳಲ್ಲಿ ಗಡಿವಿವಾದವನ್ನು ಬಗೆಹರಿಸುವ ಬಗ್ಗೆ ತೆಗೆದುಕೊಂಡಿರುವ ತೀರ್ಮಾನ ನವೇನು ?

೧೦) ಗಡಿವಿವಾದದ ವಿಷಯವಾಗಿ ಕರ್ನಾಟಕದಲ್ಲಿ ನಡೆದಿರುವ ಪ್ರದರ್ಶನದಿಂದ ಸಾರ್ವಜನಿಕ ಹಾಗೂ ಸರಕಾರದ ಆಸ್ತಿಪಾಸ್ತಿಗಾಗಿ ಆಗಿರುವ ನಷ್ಟ ಎಷ್ಟು ?

೧೧) ಪ್ರದರ್ಶನ ಕಾಲದಲ್ಲಿ ಗೋಲಿಬಾರಿನಿಂದ ಮಡಿದವರುಗಳ ಹೆಸರುಗಳೇನು ಮತ್ತು ಅವರಿಗೆ ನೀಡಿರುವ ಪರಿಹಾರ ಧನವೆಷ್ಟು ?